ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮೆ: ನಂದಿ ಇನ್‌ಪ್ರಾಸ್ಟ್ರಕ್ಚರ್ ಕಾರಿಡಾರ್ ಅವರೊಂದಿಗೆ3.4.977ರಂದು ಬೆಂಗಳೂರು ಮೈಸೂರು ಎಕ್ಸ್ ಪ್ರೆಸ್ ವೇಯನ್ನು ಬಿ.ಒ.ಒ.ಟಿ ಆಧಾರದ ಮೇಲೆ ನಿರ್ಮಾಣಕ್ಕೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಯೋಜನೆಗೆ ಬೇಕಾಗಿರುವ ಜಮೀನನ್ನು ಗುರುತಿಸಲಾಗಿದೆ. ಜಮೀನನ್ನು ಸದರಿ ಕಂಪನಿಗೆ ಒದಗಿಸಲು ಕೆ.ಐ.ಡಿ.ಬಿ. ಅವರಿಂದ ಅಧಿಸೂಚನೆ ಹೊರಡಿಸಲಾಗುತ್ತಿದೆ.

ಆ) ಈ ಯೋಜನೆಗೆ ಸುಮಾರು21 ಸಾವಿರ ಎಕರೆ ಜಮೀನು ಬೇಕಾಗಿದ್ದು ಭೂಸ್ವಾಧೀನಕ್ಕಾಗಿ ಕೆ.ಐ.ಎ.ಡಿ.ಬಿ ಅವರು ಅಧಿಸೂಚನೆ ಹೊರಡಿಸಲಾಗುತ್ತಿದೆ. ಮೆ: ನಂದಿ ಇನ್‌ಪ್ರಾಸ್ಟ್ರಕ್ಚರ್ ಕಾರಿಡಾರ್ ಅವರಿಗೆ ನೀಡಲಾಗಿದೆ. ಹತ್ತು ವರ್ಷ ಅವಧಿಯಲ್ಲಿ ಪೂರ್ಣಗೊಳಿಸಬೇಕಾಗುವುದು ಮತ್ತು 30 ವರ್ಷ ಅವಧಿಗೆ ಲೀಜ್ ನೀಡಲಾಗಿದೆ.

ಇ) ಟೋಲ್ ಶುಲ್ಕದ ಬಗ್ಗೆ ಸರ್ಕಾರ ಇದುವರೆವಿಗೆ ಯಾವುದೇ ಕರಾರನ್ನು ಕಂಪನಿಯಿಂದ ಮಾಡಿಕೊಂಡಿಲ್ಲ.

ರಾಜ್ಯದಲ್ಲಿ ನಬಾರ್ಡ್ ಯೋಜನೆಯಿಂದ ಲೋಕೋಪಯೋಗಿ ಇಲಾಖೆಯ ಕಾಮಗಾರಿ

2272 - ಶ್ರೀ ಮಲ್ಲಿಕಾರ್ಜುನ ಖರ್ಗೆ. (ಗುರುಮಿಟ್ಕಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಬಾರ್ಡ್ ಸಹಾಯದ ಯೋಜನೆಯಡಿ ರಾಜ್ಯ ಲೋಕೋಪಯೋಗಿ ಇಲಾಖಾವತಿಯಿಂದ ಪ್ರಾರಂಭದಿಂದಲೂ ತೆಗೆದುಕೊಳ್ಳಲಾದ ರಸ್ತೆ ಮತ್ತು ಸೇತುವೆ ಕಾಮಗಾರಿಗಳೆಷ್ಟು? ಹಾಗೂ ನಬಾರ್ಡನಿಂದ ಮಂಜೂರಾದ ರಸ್ತೆ ಮತ್ತು ಸೇತುವೆಗಳ ಕಾಮಗಾರಿಗಳೆಷ್ಟು? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಸದರಿ ಯೋಜನೆಯಲ್ಲಿ ರಾಜ್ಯಕ್ಕೆ ಮಂಜೂರಾದ ಹಣ ಎಷ್ಟು ಬಿಡುಗಡೆಯಾದ ಹಣ ಎಷ್ಟು? ಖರ್ಚಾದ ಹಣ ಎಷ್ಟು?

ಇ) ಸದರಿ ಯೋಜನೆಯಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುತ್ತವೆಯೇ? ಪೂರ್ಣಗೊಳ್ಳದಿದ್ದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಯೋಜನೆಯಡಿಯಲ್ಲಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ಕಾಮಗಾರಿಗಳ ವಿವರ

	ರಸ್ತೆ	*ಸೇತುವೆ*
ಮಂಜೂರಾದ ಕಾಮಗಾರಿಗಳು	484	186
ಕೈಗೊಳ್ಳಲಾದ ಕಾಮಗಾರಿಗಳು	429	180
ಕೈಗೊಳ್ಳಬೇಕಿರುವ ಕಾಮಗಾರಿಗಳು	537	31

ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ'ನಲ್ಲಿ ನೀಡಿದೆ. (ಪ್ರಶ್ನೆ 2931ರ ಅನುಬಂಧ)

ಅ) ಇಲ್ಲಿಯವರೆಗೆ ಮಂಜೂರಾದ ಹಣ - ರೂ. 275.03 ಕೋಟಿ

ಬಿಡುಗಡೆಯಾದ ಹಣ ರೂ. 48.24 ಕೋಟಿ

ಖರ್ಚಾದ ಹಣ ರೂ. 78.27 ಕೋಟಿ

ಇ) ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಪ್ರಗತಿ ತೃಪ್ತಿಕರವಾಗಿಲ್ಲದಲ್ಲಿ ನಿಯಮಾವಳಿಗಳ ಪ್ರಕಾರ ಗುತ್ತಿಗೆದಾರರಿಗೆ ದಂಡ ವಿಧಿಸಿ, ಗುತ್ತಿಗೆ ರದ್ದುಪಡಿಸಿ ಮರು ಗುತ್ತಿಗೆ ನೀಡಿ ಕೆಲಸ ಪೂರೈಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬೆಳಗಾಂ ಜಿಲ್ಲೆಯಲ್ಲಿ ಪ್ರವಾಸೋದ್ಯ ಇಲಾಖೆಯ ಕೆಲಸಗಳು

2277 - ಶ್ರೀ ಮಹಾಂತೇಶ ಎಸ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ 1996-97, 1997-98 ಹಾಗೂ 1998-99ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಾವುವು?

ಆ) ಈ ಪೈಕಿ ಪ್ರಾರಂಭವಾದ ಸಂಖ್ಯೆ ಎಷ್ಟು? ಎಷ್ಟು ಕೆಲಸಗಳು ಪ್ರಾರಂಭವಾಗಿರುವುವು? ಅವು ಈಗ ಯಾವ ಹಂತದಲ್ಲಿ ಇರುವುವು?

ಇ) ಇವುಗಳಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ? ಹಾಗೂ ರಾಜ್ಯ ಸರ್ಕಾರದ ನೆರವಿನಿಂದ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)

ಈ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ತೆನಿಕೊಳ ಗ್ರಾಮದಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಪ್ರವಾಸೋದ್ಯಮ ಇಲಾಖೆಯವರು ಹೊನಲು ಬೆಳಕು ಯೋಜನೆ ಮತ್ತು ವೇ ಸೈಡ್ ಫೆಸಿಲಿಟಿ ಕೆಲಸಗಳನ್ನು ತೆಗೆದುಕೊಳ್ಳಲು ಮಂಜೂರಾತಿ ನೀಡಲಾಗಿದೆಯೇ? ಹಾಗಿದ್ದಲ್ಲಿ ಅವು ಯಾವ ಹಂತದಲ್ಲಿ ಇರುವುವು?

ಉ) ಇದಕ್ಕಾಗಿ ಕೇಂದ್ರ ಸರ್ಕಾರದ ನೆರವಿನಿಂದ ಎಷ್ಟು ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ? ಮತ್ತು ಇದರಲ್ಲಿ ಎಷ್ಟು ಖರ್ಚಾಗಿರುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ರಾಜ್ಯ ಯೋಜನೆಯಡಿಯಲ್ಲಿ ಈ ಕೆಳಕಂಡ ಪ್ರವಾಸಿ ಸೌಲಭ್ಯಗಳಿಗೆ ಮಂಜೂರಾತಿ ನೀಡಲಾಗಿದೆ.

1. ಕಿಲ್ಲಾ ಕೆರೆಗೆ ಜಟ್ಟಿ ನಿರ್ಮಾಣ
2. ಯೋಗಿಕೊಳ ಕೂಡು ರಸ್ತೆ ಅಭಿವೃದ್ಧಿ
3. ಗೋಕಾಕ್ ತಾಲ್ಲೂಕಿನ ಗೊಡಚನ ಮಲ್ಕಿಯಲ್ಲಿ ಪ್ರವಾಸಿ ಸೌಲಭ್ಯ ನಿರ್ಮಾಣ